


ಪ್ರವೇಶಿಸಲು ಸಾಧ್ಯವಾದೀತೇನೋ...' ಎಂದುಕೊಂಡು ರಾಜೀವ ಬೈಕಿನತ್ತ ಹೆಜ್ಜೆ ತಿರುಗಿಸಿದ್ದ. ಮರುಕ್ಷಣವೇ ಇಬ್ಬರು ಕುಳಿತ ದ್ವಿಚಕ್ರವಾಹನ ಬೆಟ್ಟಹಳ್ಳಿಯತ್ತ ಧಾವಿಸಿತ್ತು.

ಊರಿನ ಮಧ್ಯೆ ಹಾದುಹೋಗುತ್ತಿದ್ದ ಸಿಮೆಂಟ್ ರಸ್ತೆಯಲ್ಲಿ ಸಾಗಿದ್ದವರು, ಸಾಲುಮನೆಗಳು ಹಿಂದೆ ಸರಿಯುತ್ತಿದ್ದಂತೆ ಮತ್ತೆ ಕಚ್ಚಾರಸ್ತೆಯ ಪಾಲಾಗಿದ್ದರು. ಸ್ವಲ್ಪ ಹೊತ್ತಿನ ಮುಂಚೆ ಏನೆಲ್ಲ ಚರ್ಚಿಸಿಕೊಂಡು ದೇವಾಲಯದ ದಾರಿಗೇ ಅಂಟಿಕೊಂಡಿದ್ದರೋ ಅದೇ ಮಾರ್ಗ ಈಗವರ ನಿರ್ಧಾರಕ್ಕೆ ಭಂಗ ತರುತ್ತದೆ ಎಂಬ ಕಲ್ಪನೆ ರಾಜೀವನಿಗಂತೂ ಇರಲಿಲ್ಲ. ಸೋಜಿಗವೆಂದರೆ ಆ ಮಣ್ಣು ರಸ್ತೆಗಿಳಿದ ಕೆಲವೇ ನಿಮಿಷಗಳಲ್ಲಿ ಆ ಊರಿನ ದೈತ್ಯಕ್ವಾರಿ ಇವರ ದೃಷ್ಟಿಗೆ ತೊಡರಿಕೊಂಡಿದ್ದಿತು. ರಸ್ತೆಯ ಇಕ್ಕೆಲಗಳಲ್ಲಿ ಗಜಗಾತ್ರದ ಗ್ರಾನೈಟ್ ದಿಮ್ಮಿಗಳು ಬಿಕರಿಗಾಗಿ ಕಾಯುತ್ತಿರುವಂತೆ ಬಿದ್ದುಕೊಂಡಿದ್ದವು. ತೀರಾ ಹತ್ತಿರದಿಂದಲೆ ಕಲ್ಲು ಗಣಿಗಾರಿಕೆಯ ಅಬ್ಬರ ಕಿವಿಗಡಚಿಕ್ಕುವ ಯಂತ್ರಗಳ ಸದ್ದು ಕ್ವಾರಿಯ ಇರವನ್ನು ಪ್ರಕಟಿಸಿಕೊಂಡಿದ್ದಿತು.

'ರಾಜೀವ ಅಲ್ಲಿಯೇ ನೋಡು ಈ ಊರಿನ ಏಕಶಿಲಾ ಬೆಟ್ಟ ಇದ್ದದ್ದು' ಎಂದುಕೊಂಡು ರಾಮನಾಥ ಬೈಕನ್ನು ನಿಧಾನಗೊಳಿಸಿದ್ದ. ಗೆಳೆಯ ಕೈತೋರಿಸಿದತ್ತ ದೃಷ್ಟಿ ಕೀಲಿಸಿದರೂ ಅಲ್ಲಿ ಬೆಟ್ಟ ಇದ್ದಿರಬಹುದಾದ ಯಾವ ಕುರುಹೂ ರಾಜೀವನಿಗೆ ಭಾಸವಾಗಲಿಲ್ಲ. ಅಚ್ಚರಿಯ ಆಳಕ್ಕೆ ಬಿದ್ದವನು 'ಒಂದು ನಿಮಿಷ ಬೈಕ್ ನಿಲ್ಲಿಸು..' ಎಂದು ಆತುರ ತೋರಿಸಿದ್ದ. 'ನನ್ನ ಮಾತಿನಿಂದ ನಿನಗೆ ಅಚ್ಚರಿಯಾಯಿತೆ! ಅಲ್ಲೀಗ ಯಾವ ಬೆಟ್ಟವೂ ಉಳಿದಿಲ್ಲ!, ಇಡೀ ಬೆಟ್ಟವನ್ನು ಮುಕ್ಕಿ ಸ್ವಾಹಾ ಮಾಡಿದ ನಂತರವೂ ಈಗ ನೆಲದಾಳದಲ್ಲಿ ಪಾತಾಳಗರಡಿ ಸಾಗಿದೆ!. ಇಷ್ಟು ಹತ್ತಿರಕ್ಕೆ ಬಂದವರು ಆ ಭಯಾನಕ ಪ್ರಪಾತವನ್ನು ಕಣ್ಣು ತುಂಬಿಸಿಕೊಳ್ಳದಿದ್ದರೆ ಏನು ಚಂದ! ನಡೀ ಆ ಕಡೆ ಹೋಗಿ ಬರೋಣ' ಎಂದುಕೊಂಡು ರಾಮನಾಥ ಬೈಕಿಗೆ ಬ್ರೇಕ್ ಹಾಕಿದ್ದ. ಮರು ಮಾತಿಲ್ಲದೆ ಇಬ್ಬರು ರಸ್ತೆಯ ಬದಿಯಲ್ಲಿಯೇ ಇದ್ದ ಕ್ವಾರಿಯತ್ತ ಹೆಜ್ಜೆ ಹಾಕಿದ್ದರು.

ಆ ಕ್ವಾರಿಯ ಪ್ರಪಾತದ ದಡದಲ್ಲಿ ನಿಂತು ಆಳಕ್ಕೆ ದೃಷ್ಟಿ ಹರಿಸಿದ ರಾಜೀವನಿಗೆ ಬವಳಿ ಬರುವಂತಾಗಿದ್ದಿತು. ಅಷ್ಟು ಆಳದ ಕ್ವಾರಿಯದು. ನೂರಿನ್ನೂರಕ್ಕೂ ಮಿಕ್ಕು ಅಲ್ಲಿ ಕಾರ್ಮಿಕರು ಮುಗಿಬಿದ್ದಿದ್ದರು. ಅತ್ತಿತ್ತ ಚಲಿಸುತ್ತಿದ್ದ ಜೆಸಿಬಿ ಕ್ರೇನ್‌ಗಳು, ಲಾರಿ ಟಿಪ್ಪರ್‌ಗಳು ಮಕ್ಕಳ ಆಟಿಕೆಗಳಂತೆ ಗೋಚರಿಸುತ್ತಿದ್ದವು. ಅಸಹನೀಯವಾದ ಸದ್ದು ಗದ್ದಲ ಎದೆ ನಡಗಿಸುವಂತೆ ಹಿಂಸೆಯಾಗುತ್ತಿತ್ತು. ಆ ದೃಶ್ಯವನ್ನು ಇನ್ನಷ್ಟು ಕಣ್ಣು ತುಂಬಿಸಿಕೊಳ್ಳಲು ಇಚ್ಚಿಸದ ರಾಜೀವ 'ನಡೀ ಜಾಗ ಖಾಲಿ ಮಾಡೋಣ' ಎಂದು ಅವಸರಿಸಿದ್ದೇ ಇಬ್ಬರು ವಾಹನದತ್ತ ಮರಳಿದ್ದರು.

ಅಲ್ಲಿಂದ ಹೊರಟವರು ಐದೇ ನಿಮಿಷಗಳಲ್ಲಿ ಗುಂಡು ತೋಪನ್ನು ಪ್ರವೇಶಿಸಿಯಾಗಿತ್ತು. ಹಳೇ ಕಾಲದ ಭಾರೀಗಾತದ ಹುಣಸೇಮರಗಳ ಮಧ್ಯೆ ದೇವಾಲಯ ಇವರ ಬರವಿಗಾಗಿ ಕಾಯುತ್ತಿರುವಂತೆ ಕಣ್ಣಿಗೆ ಬಿದ್ದಿತು. ಗರ್ಭಗುಡಿ ವಿನಃ ಉಳಿದ ಭಾಗವನ್ನು ಆಯತಾಕಾರದಲ್ಲಿ ನಿರ್ಮಿಸಲಾಗಿದ್ದ ಶಿವ ದೇವಾಲಯವದು. ಮೊದಲ ನೋಟದಲ್ಲಿಯೇ ಕನಿಷ್ಠ ನೂರು ವರ್ಷಗಳಿಗೂ ಹಿಂದಿನ ನಿರ್ಮಾಣವೇ ಇರಬೇಕು ಎಂದುಕೊಂಡ ರಾಜೀವನಿಗೆ ಅಂಥ ಪ್ರಾಚೀನ ದೇಗುಲದ ಸುತ್ತಲು ಆವರಿಸಿಕೊಂಡಿದ್ದ ಕುರುಚಲು ಗಿಡಗಳನ್ನು ಕಂಡು ಬೇಸರವಾಗದಿರಲಿಲ್ಲ. ದೇವಾಲಯದ ಗೋಡೆಗೆ ದಪ್ಪದ ಕಲ್ಲುದಿಂಡುಗಳನ್ನು ಬಳಸಿದ್ದಲ್ಲದೆ, ಭಿತ್ತಿಯ ಸುತ್ತಲೂ ಬಿಡಿಸಿದ್ದ ಉಬ್ಬು ಶಿಲ್ಪಗಳ ಸೌಂದರ್ಯ ಅದರ ಶೋಭೆಗೆ ಮತ್ತಷ್ಟು ಕಾರಣವಾಗಿದ್ದಿತು. ರಾಮನಾಥ ಈ ಶಿಲ್ಪ ಸೊಬಗನ್ನು ಕ್ಯಾಮರಾದಲ್ಲಿ ಸೆರೆಹಿಡಿಯತೊಡಗಿದ್ದ. ಸುಂದರವಾದ ಚಿತ್ರಲೇಖನವನ್ನು ಸಿದ್ಧಪಡಿಸಲು ಒಳ್ಳೇ ಭೂಮಿಕೆ ದೊರೆಯಿತಲ್ಲ ಎಂಬ ಖುಷಿಯಲ್ಲಿ ರಾಜೀವ ಪ್ರತಿಯೊಂದು ಭಾಗವನ್ನು ಸೂಕ್ಷ್ಮವಾಗಿ ಗಮನಿಸುತ್ತ ಟಿಪ್ಪಣಿ ಮಾಡಿಕೊಳ್ಳತೊಡಗಿದ್ದ. ಆದರೂ ಇಂಥ ಅಪರೂಪದ ದೇವಾಲಯವೇಕೆ ಜನರ ಬಳಕೆಯಿಲ್ಲದೆ ನಿರ್ಜೀವಗೊಂಡಿದೆ? ಎಂಬ ಪ್ರಶ್ನೆ ಕಾಡುತ್ತಲಿತ್ತು.

ಹೊರಗೋಡೆಗಳ ಪ್ರದಕ್ಷಿಣೆ ಮುಗಿಯುತ್ತಲೇ ಎದುರುಗೊಂಡ ದೀಪ ಸ್ಥಂಭದತ್ತ ನೋಟ ಹರಿಸಿ, ದೇವಾಲಯದೊಳಕ್ಕೆ ಪ್ರವೇಶಿಸಿದವರಿಗೆ ಊಹಿಸಲಾಗದ ಅಚ್ಚರಿಯೊಂದು ಕಣ್ಣಿಗೆ ಬಿದ್ದಿದ್ದಿತು. ಆ ಕೌತುಕವನ್ನು ಹತ್ತಿಕ್ಕಲಾಗದೆ ಸೀದಾ ಗರ್ಭಗುಡಿಯ ಬಾಗಿಲಿಗೆ ಬಂದಿದ್ದರು. ಒಳಗಡೆ ಬಾಲಕರಿಬ್ಬರು ಬಹುಶಃ ಪ್ರೌಢಶಾಲಾ ವಿದ್ಯಾರ್ಥಿಗಳೇ ಇರಬೇಕು, ದೇವರ ಮುಂದೆ ಕರ ಜೋಡಿಸಿ ನಿಂತಿದ್ದರು. ಪಾಣಿಪೀಠ ಮತ್ತು ಲಿಂಗದ ಮೇಲೆ ನೀರು ಚಿಮುಕಿಸಿ ಮಲ್ಲಿಗೆ ಹೂವಿನಿಂದ ಅಲಂಕರಿಸಿ, ಊದುಬತ್ತಿ ಅಂಟಿಸಿದ್ದರು. ದೇವರಿಗರ್ಪಿಸಿದ ತೆಂಗಿನ ಹೋಳಿನಲ್ಲಿ ಬೆಳಗಿಸಿದ್ದ ಕರ್ಪೂರ ಬೆಳಕಿನ ಮಂದಹಾಸವನ್ನು ಬೀರುತ್ತಿತ್ತು.

ಆ ಹುಡುಗರಿಗೆ ಏಕಾಏಕಿ ಅಲ್ಲಿ ಆಗಂತುಕರನ್ನು ಕಂಡು ಅಚ್ಚರಿಯಾಗಿರ ಬೇಕು. ಮುಖದಲ್ಲಿ ಪ್ರಶ್ನೆಗಳ ಸರಣಿಯನ್ನೇ ತುಂಬಿಸಿಕೊಂಡು ಇವರತ್ತ ನೋಡಿದವರು 'ಸಾರ್ ಮಂಗಳಾರತಿ ತೆಗೆದುಕೊಳ್ಳಿ' ಎಂದುಕೊಂಡು ತೆಂಗಿನ ಹೋಳಿನಲ್ಲಿ ಉರೀತಿದ್ದ ಕರ್ಪೂರದಾರತಿಯನ್ನು ಅವರಲ್ಲೊಬ್ಬ ಎದುರಿಗೆ ಹಿಡಿದಾಗ ಈ ಆಗಂತುಕರಿಬ್ಬರೂ ಆರತಿ ತೆಗೆದುಕೊಂಡು ಕಣ್ಣಿಗೊತ್ತಿ ಕೊಂಡರು.

'ಯಾರಪ್ಪ ನೀವು? ಏನು ಓದುತ್ತಿದ್ದೀರಿ? ಸೋಮೇಶ್ವರನಿಗೆ ಹರಕೆ ಹೊತ್ತುಕೊಂಡಿದ್ದೀರಾ? ಈಗೇನು ಪರೀಕ್ಷೆ ಕಾಲವಲ್ಲವಲ್ಲ!' ರಾಜೀವ ಪ್ರಶ್ನೆಗಳ ಜೊತೆಯಲ್ಲಿ ಅಚ್ಚರಿಯನ್ನೂ ಹೊರಹಾಕಿದ್ದ.

'ಸಾರ್ ನಾವು ಹೈಸ್ಕೂಲ್ ಹುಡುಗರು. ನಮ್ಮಿಬ್ಬರ ಅಪ್ಪಂದಿರು ಇಲ್ಲಿನ ಕ್ವಾರಿಯಲ್ಲಿ ಕೂಲಿ ಕೆಲಸ ಮಾಡ್ತಾರೆ, ನಾವಿಬ್ಬರೂ ಚೆನ್ನಾಗಿ ಓದಿ ದೊಡ್ಡೋರಾದ ಮೇಲೆ ಇಂಥ ಕ್ವಾರೀನ ತೆಗೆದು ಹಣ ಸಂಪಾದಿಸಬೇಕು ಅಂತಿದ್ದೀವಿ. ಈ ನಮ್ಮ ಕೋರಿಕೆಯನ್ನ ಈಡೇರಿಸು ಸ್ವಾಮಿ ಅಂತಲೇ ದೇವರನ್ನ ಕೇಳಿಕೊಳ್ಳೋಕೆ ಬಂದಿದ್ವಿ' ಮಂಗಳಾರತಿ ಕೊಟ್ಟ ಹುಡುಗನೇ ತಮ್ಮ ಮನದಿಂಗಿತ ವನ್ನು ಬಿಚ್ಚಿಟ್ಟಿದ್ದ. ನಂತರ ಮತ್ತೊಬ್ಬ ಬಾಲಕನ ಸರದಿ ಶುರುವಾಗಿತ್ತು 'ಸಾರ್ ಈ ಊರು ತುಂಬ ಕಾಸು ಓಡಾಡ್ತಿದ್ರು ಯಾರೂ ಕೂಡ ಈ ಗುಡೀನ ರಿಪೇರಿ ಮಾಡಿಸಿಲ್ಲ. ನಮಗೇನಾದ್ರು ಕ್ವಾರಿ ಸಿಕ್ಕರೆ ಅದರಿಂದ ಬರೋ ಸಂಪಾದನೆ ಯಲ್ಲಿಯೇ ಇದನ್ನ ಸುಂದರವಾಗಿ ರಿಪೇರಿ ಮಾಡಿಸ್ತೀವಿ...' ಅವನ ಮಾತು ಸಾಗಿದ್ದಿತು.

ಆ ಬಾಲಕರ ವಯಸ್ಸಿಗೂ ಮೀರಿದ ಅಂಥ ಮಹತ್ವಾಕಾಂಕ್ಷೆಯ ಧಾವಂತಕ್ಕೆ ಹೇಗೆ ಪ್ರತಿಕ್ರಿಯಿಸಬೇಕೋ! ರಾಜೀವ ನಿಂತಲ್ಲೆ ಬೆವರಿಬಿಟ್ಟಿದ್ದ. ಗಣಿ ಧಣಿಗಳು ಪ್ರಕೃತಿಯ ಜೊತೆಗೆ ಪರಿಸರವನಷ್ಟೇ ಕಲುಷಿತಗೊಳಿಸಿರಲಿಲ್ಲ. ಅವರ ಧನದಾಹದ ಕಬಂಧಬಾಹುಗಳು ನಾಳೆಗಳ ವಾರಸುದಾರರಾದ ಈ ಮಕ್ಕಳ ಯೋಚನೆಗಳನ್ನೂ ಕಲುಷಿತಗೊಳಿಸಿ ದಿಕ್ಕು ತಪ್ಪಿಸುತ್ತಿವೆಯೆಲ್ಲ ಎಂಬ ನೋವು ಹತಾಶೆ ನಖಶಿಖಾಂತ ಅವನನ್ನು ಆವರಿಸಿಕೊಂಡು ನಿಂತಲ್ಲೇ ಕುಸಿಯುವಂತಾ ಗಿದ್ದಿತು. ಗೆಳೆಯನ ಮನದ ತುಮುಲವನ್ನು ಓದಿಕೊಂಡವನಂತೆ ರಾಮನಾಥ ಸಮಾಧಾನಗೊಳಿಸುವ ಪರಿಯಲ್ಲಿ ಅವನ ಬೆನ್ನಿನ ಮೇಲೆ ಮೃದುವಾಗಿ ತಾಡಿಸತೊಡಗಿದ್ದ.

■